ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **938**
ಸದಸ್ಯರ ಹೆಸರು : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 20.09.2021
ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

*****

	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿನ ರೈತರ ಬೆಳೆಗಳಿಗೆ ಸಮರ್ಪಕವಾಗಿ ವಿದ್ಯುತ್ ನೀಡದಿರುವುದರಿಂದ ಬೆಳೆದ ಬೆಳೆಗಳು ಸುಮಾರು ಪ್ರಮಾಣದಲ್ಲಿ ನಾಶವಾಗುತ್ತಿದ್ದು, ಹೆಚ್ಚಿನ ಸಮಯ ವಿದ್ಯುತ್ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು)	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಬೀದರ್ ಜಿಲ್ಲೆಯ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಪ್ರತಿನಿತ್ಯ ನಿರಂತರವಾಗಿ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್‌ನ್ನು ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ, 7 ಗಂಟೆಗಳಿಗಿಂತ ಹೆಚ್ಚಿನ ಅವಧಿಯ ವಿದ್ಯುತ್ ಪೂರೈಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಆ)	2015 ರಿಂದ 2021 ರವರೆಗೆ ಬೀದರ್ ಜಿಲ್ಲೆಯಲ್ಲಿ ಬಾವಿ/ಕೊಳವೆ ಬಾವಿಗಳಿಗೆ ಸಂಪರ್ಕ ಕಲ್ಪಿಸಲು ಅರ್ಜಿ ಸಲ್ಲಿಸಿರುವ ರೈತರ ಸಂಖ್ಯೆ ಎಷ್ಟು: (ತಾಲ್ಲೂಕುವಾರು ರೈತರ ಹೆಸರು, ವಿಳಾಸದೊಂದಿಗೆ ವರ್ಷವಾರು ಮಾಹಿತಿ ನೀಡುವುದು)	2015 ರಿಂದ 2021 ರ ವರೆಗೆ ಬೀದರ್ ಜಿಲ್ಲೆಯಲ್ಲಿ ಕೊಳವೆ ಬಾವಿಗಳಿಗೆ ಸಂಪರ್ಕ ಕಲ್ಪಿಸಲು ಅರ್ಜಿ ಸಲ್ಲಿಸಿರುವ ರೈತರ ಸಂಖ್ಯೆ – 8183, ಸಂಪರ್ಕ ಕಲ್ಪಿಸಲಾದ ಸಂಖ್ಯೆ – 7577, ರೈತರ ಹೆಸರುಗಳ ಮಾಹಿತಿ ಅಗಾದವಾಗಿರುವುದರಿಂದ ತಾಲ್ಲೂಕುವಾರು ರೈತರ ಸಂಖ್ಯೆಯ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. ಬಾಕಿ ಉಳಿದಿರುವ ಕಾಮಗಾರಿಗಳು ಪ್ರಗತಿಯಲ್ಲಿದ್ದು ವಿಳಂಬಕ್ಕೆ ಕಾರಣಗಳು ಕೆಳಗಿನಂತಿವೆ. • ಬೆಳೆದು ನಿಂತ ಪೈರುಗಳು / ರೈತರಿಂದ ವಿದ್ಯುತ್ ಮಾರ್ಗ ನಿರ್ಮಾಣಕ್ಕೆ ತಕರಾರು • ಅವಶ್ಯವಿರುವ ಶುಲ್ಕಗಳನ್ನು ಸಕಾಲದಲ್ಲಿ ಪಾವತಿ ಮಾಡದಿರುವುದು / ನಕಲಿ ದಾಖಲೆಗಳು • ದಾಖಲಾತಿಗಳಲ್ಲಿನ ವಿವರಗಳು ಮತ್ತು ಕ್ಷೇತ್ರದಲ್ಲಿನ ವಿವರಗಳು ತಾಳೆಯಾಗದಿರುವುದು (ಉದಾ: ಸರ್ವೆ ನಂಬರ್) • ಔರಾದ ಮತ್ತು ಭಾಲ್ಕಿ ತಾಲೂಕಿನ ಕೆಲವು ಕಡೆ ಅರಣ್ಯ ಇಲಾಖೆಯಿಂದ ವಿದ್ಯುತ್ ಮಾರ್ಗ ನಿರ್ಮಾಣಕ್ಕೆ ಅನುಮತಿ ನೀಡದೆ ಇರುವುದು.
ಇ)	ರೈತರಿಂದ ಬಂದಿರುವ ಅರ್ಜಿಗಳ ಪೈಕಿ ಎಷ್ಟು ರೈತರಿಗೆ ಇಲ್ಲಿಯವರೆಗೆ ಸಂಪರ್ಕ ಕಲ್ಪಿಸಲಾಗಿದೆ: ವಿಳಂಬಕ್ಕೆ ಕಾರಣಗಳೇನು? (ಸ್ಪಷ್ಟವಾದ ಮಾಹಿತಿಯನ್ನು ನೀಡುವುದು)	

ಸಂಖ್ಯೆ: ಎನರ್ಜಿ 221 ಇಬಿಎಸ್ 2021

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ
ಮತ್ತು ಸಂಸ್ಕೃತಿ ಸಚಿವರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಘುನಾಥ್ ರಾವ್ ಮಲ್ಕಾಪೂರೆ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 938ಕ್ಕೆ ಅನುಬಂಧ:

2015-16ನೇ ಸಾಲಿನಿಂದ 2021-22ನೇ ಸಾಲಿನ ಆಗಸ್ಟ್ 21 ರವರೆಗೆ ಬೀದರ್ ಜಿಲ್ಲೆಯಲ್ಲಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅರ್ಜಿ ಸಲ್ಲಿಸಿರುವ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಿರುವ ಕೊಳವೆ ಬಾವಿಗಳ ತಾಲ್ಲೂಕುವಾರು ವಿವರಗಳು:-

ಕ್ರ. ಸಂ	ವರ್ಷ	ತಾಲೂಕಿನ ಹೆಸರು	ನೊಂದಣಿಗೊಂಡ ಅರ್ಜಿ ಸಂಖ್ಯೆ	ವಿದ್ಯುತ್ ಸಂಪರ್ಕ ಕಲ್ಪಿಸಿದ ಸಂಖ್ಯೆ
1	2015-16	ಔರಾದ	363	336
		ಭಾಲ್ಕಿ	426	404
		ಬೀದರ	653	627
		ಹುಮನಾಬಾದ	422	401
		ಬಸವಕಲ್ಯಾಣ	222	192
2	2016-17	ಔರಾದ	398	386
		ಭಾಲ್ಕಿ	301	280
		ಬೀದರ	312	285
		ಹುಮನಾಬಾದ	43	28
		ಬಸವಕಲ್ಯಾಣ	117	85
3	2017-18	ಔರಾದ	373	347
		ಭಾಲ್ಕಿ	326	320
		ಬೀದರ	329	284
		ಹುಮನಾಬಾದ	75	69
		ಬಸವಕಲ್ಯಾಣ	165	159
4	2018-19	ಔರಾದ	397	390
		ಭಾಲ್ಕಿ	260	248
		ಬೀದರ	489	477
		ಹುಮನಾಬಾದ	77	64
		ಬಸವಕಲ್ಯಾಣ	94	73
5	2019-20	ಔರಾದ	312	303
		ಭಾಲ್ಕಿ	260	241
		ಬೀದರ	380	369
		ಹುಮನಾಬಾದ	39	16
		ಬಸವಕಲ್ಯಾಣ	36	26
6	2020-21	ಔರಾದ	311	287
		ಭಾಲ್ಕಿ	183	177
		ಬೀದರ	331	306
		ಹುಮನಾಬಾದ	39	22
		ಬಸವಕಲ್ಯಾಣ	33	5
7	2021-22	ಔರಾದ	138	127
		ಭಾಲ್ಕಿ	100	92
		ಬೀದರ	150	142
		ಹುಮನಾಬಾದ	13	4
		ಬಸವಕಲ್ಯಾಣ	16	5
		ಒಟ್ಟು	**8183**	**7577**